''ಈ ಬಗ್ಗೆ ನನಗೆ ಅನುಮಾನವಿದೆ. ಹಾಗಾದರೆ, ಈ ವರೆಗೆ ಬೇರೆ ಯಾರೂ ಈ ಕುರಿತಾಗಿ ಏಕೆ ಪ್ರಯೋಗಗಳನ್ನು ಮಾಡಿಲ್ಲ?''

''ನಾನು ನಿನಗೆ ಹೇಳುತ್ತಲೇ ಇದ್ದೇನೆ. ಈ ರಾಜಪಾಕ ತುಂಬಾ ದುಬಾರಿಯಾದ ವಸ್ತು. ಕೆಲವೇ ಕೋಟ್ಯಧೀಶರನ್ನು ಬಿಟ್ಟರೆ ಇದನ್ನು ಕೊಳ್ಳುವ ತಾಕತ್ತು ಯಾರಿಗೂ ಇಲ್ಲ. ಹೆಣ್ಣುಮಕ್ಕಳಿಗೋಸ್ಕರ ಪ್ರಸಾಧನ ವಸ್ತುಗಳನ್ನು ತಯಾರಿಸುವ ಕೆಲವು ಕಂಪನಿಗಳು ಈ ವಸ್ತುವನ್ನು ಬಳಸುತ್ತಾರೆ, ಹೆಸರಿಗೆ ಮಾತ್ರ! ಇದನ್ನು ಬಳಸಿದರೆ ವಯೋಸಹಜವಾದ ಚರ್ಮದ ಸುಕ್ಕುಗಳು ಮಾಯವಾಗುತ್ತವೆಂದು ಜಾಹೀರಾತು ಕೊಡುತ್ತವೆ.''

''ಚರ್ಮದ ಸುಕ್ಕುಗಳು ಮಾಯವಾಗುತ್ತವಾ ಆಲ್ಬರ್ಟ್?'' ಮೇಬಲಳ ಕಣ್ಣುಗಳು ಮಿನುಗಿದವು.

''ಯಾರಿಗೊತ್ತಮ್ಮ? ರಾಜಪಾಕದಿಂದ ನಮ್ಮ ಪುಟ್ಟಿಗೆ ಒಳಿತಾಗಿದೆ ಎಂಬುದನ್ನಷ್ಟೇ ನಾನು ಬಲ್ಲೆ. ನಾವಿದನ್ನು ಮುಂದುವರೆಸಿದರೆ ಮತ್ತೂ ಒಳ್ಳೆಯದು ಎಂದು ನನ್ನ ಭಾವನೆ... ನಾನು ಹೇಳುವುದನ್ನು ಕೇಳು ಮೇಬಲ್... ನನ್ನ ಬಳಿ ಇನ್ನೂರ ನಲವತ್ತು ಜೇನು ಪೆಟ್ಟಿಗೆಗಳಿವೆ.. ಇದರಲ್ಲಿ ರಾಜಪಾಕಕ್ಕೆ ಎಂದೇ ನೂರು ಪೆಟ್ಟಿಗೆಗಳನ್ನು ನಮ್ಮ ಪುಟ್ಟಿಗೆಂದು ಮೀಸಲಿಟ್ಟರೆ ಬೇಕಾದಷ್ಟಾಯಿತು.''

''ಮಿಸ್ಟರ್ ಅಲ್ಬರ್ಟ್ ಟೇಯ್ಲರ್!! ನಿನ್ನ ತಲೆ ಸರಿ ಇದೆ ತಾನೇ?'' ಮೇಬಲ್ ಕಣ್ಣುಗಳನ್ನು ಬಿಡುತ್ತಾ ಉದ್ಗರಿಸಿದಳು.

''ನಾನು ಹೇಳುವುದನ್ನು ಪೂರ್ತಿಯಾಗಿ ಕೇಳಿಸಿಕೊ ಮೇಬಲ್...''

''ಇಲ್ಲ ಆಲ್ಬರ್ಟ್, ಖಂಡಿತ ಇಲ್ಲ. ನನ್ನ ಪುಟ್ಟಿಗೆ ನಿನ್ನ ಆ ಜೇನ್ನೊಣಗಳ ಲೇಹ್ಯವನ್ನು ಕೊಡಿಸಲು ನಾನು ಖಂಡಿತ ತಯಾರಿಲ್ಲ.'' ಅವಳು ದೃಢ ನಿರ್ಧಾರ ತಳೆದಂತೆ ಕಾಣಿಸುತ್ತಿತ್ತು.

''ಮೇಬಲ್!''

''ಕಳೆದ ವರ್ಷ ಜೇನು ಕೃಷಿ ಚೆನ್ನಾಗಿರಲಿಲ್ಲವೆಂದು ನೀನೇ ಹೇಳುತ್ತಿದ್ದೆ. ಈಗ ನೋಡಿದರೆ ಇಂತಹ ಪ್ರಯೋಗಗಳು...''

''ಈ ರಾಜಪಾಕದ ಬಗ್ಗೆ ನಿನಗೆ ಕೆಲವು ವಿಚಾರಗಳನ್ನು ಹೇಳಲಿಕ್ಕುಂಟು ಮೇಬಲ್. ದಯವಿಟ್ಟು ಸಮಧಾನ ಚಿತ್ತದಿಂದ ಕೇಳು.''

ಅವಳು ಹೆಣಿಗೆಯ ಕಡ್ಡಿಗಳನ್ನು ಎತ್ತಿಕೊಂಡಳು. ಜೇನ್ನೊಣಗಳ ಬಗ್ಗೆ ಕಿಂಚಿತ್ತೂ ಗೊತ್ತಿಲ್ಲದಿರುವವರಿಗೆ ಹೇಗೆ ತಿಳಿ ಹೇಳುವುದೆಂಬ ಗೊಂದಲದಲ್ಲಿದ್ದ ಆಲ್ಬರ್ಟ್. ಆದರೂ ಅವನು ಹೇಳಲಾರಂಭಿಸಿದ:

''ಒಂದು ಜೇನು ಹಿಂಡು ಅಥವ **Colony**ಗೆ ಒಂದು ಒಂದೇ ಒಂದು ರಾಣಿ ಇರುತ್ತದೆ ಎಂಬುದು ನಿನಗೆ ಗೊತ್ತು ತಾನೆ?''

''ಗೊತ್ತು, ಗೊತ್ತು. ಆ ರಾಣಿ ಮೊಟ್ಟೆಗಳನ್ನಿಡುತ್ತದೆ ಎನ್ನುವುದೂ ಗೊತ್ತು.''

''ಹೌದು. ಈ ರಾಣಿ ಬೇರೆ ಬೇರೆ ಥರದ ಮೊಟ್ಟೆಗಳನ್ನಿಡುತ್ತದೆ. ಇದು ನಿನಗೆ ಗೊತ್ತಿರಲಾರದು. ಇದನ್ನೊಂದು ಅಚ್ಚರಿಯ ಸಂಗತಿಯೇ ಎನ್ನಬಹುದು. ಈ ಮೊಟ್ಟೆಗಳಿಂದ ಗಂಡು ಹಾಗೂ ಕೆಲಸಗಾರರೆಂಬ ಎರಡು ವಿಧದ ಜೇನು ನೊಣಗಳು ಹುಟ್ಟುತ್ತವೆ. ಈ ಗಂಡು ನೊಣಗಳು ಒತ್ತಟ್ಟಿಗೆ ಇರಲಿ. ರಾಣಿ ಮತ್ತು ಕೆಲಸಗಾರರೆಂಬ ಹುಳಗಳು ಹೆಣ್ಣುಗಳಾಗಿರುತ್ತವೆ. ಈ ಹೆಣ್ಣುಹುಳಗಳಿಗೆ ಒಂಥರಾ ಹಿಜಡಾಗಳೆನ್ನಬಹುದೇನೋ! ಈ ರಾಣಿ ಹುಳ ಮಾತ್ರ ಲೈಂಗಿಕವಾಗಿ ಕ್ರಿಯಾಶೀಲವಾಗಿರುತ್ತದೆ. ಒಂದು ದಿನಕ್ಕೆ ತನ್ನ ವಜನಿನಷ್ಟೇ ಮೊಟ್ಟೆಗಳನ್ನಿಡಬಲ್ಲುದು. ಈ ರಾಣಿ ಹುಳ ಜೇನು ಹುಟ್ಟಿನ ಒಂದೊಂದೂ ಗೂಡೊಳಗೆ ಹೊಕ್ಕು ಮೊಟ್ಟೆಗಳನ್ನಿಡಬಲ್ಲದು. ಇದರಲ್ಲಿ